Karnataka Veterinary, Animal & Fisheries Sciences University, Bidar
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಡೀನ್‌ರವರ ಕಾರ್ಯಾಲಯ
ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

Office of the Dean
Veterinary College, BIDAR

ಸಂಖ್ಯೆ ಡೀನ್/ಪವೈಮ(ಬೀ)/ಬೊ.ಗು.ನೇ/ಪ್ರಕಟಣೆ/2024-25 ದಿನಾಂಕ 31-07-2024

Veterinary College, BIDAR
Sl. No: 452 Date: 31/7/24

## ಪ್ರಕಟಣೆ

**ವಿಷಯ:** ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು

**ಉಲ್ಲೇಖ:** 1) File No. RGR-EST0GEN/14/2023-ESTD-O/oDR Dtd: 14-06-2024

2) No.R/Rectt/104th BOM/Dir.RecTeacher.ScoreCard/2022/2697 Dtd 8-9-2022

<><><>

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಎದುರಾಗಿ ಗುತ್ತಿಗೆ ಆಧಾರದ ಮೇಲೆ ಬೋಧಕ ಸಿಬ್ಬಂದಿಗಳನ್ನು ನೇಮಕ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದೆ. ಗುತ್ತಿಗೆ ನೇಮಕಾತಿ ಬಯಸುವ ಅಭ್ಯರ್ಥಿಗಳು **ದಿನಾಂಕ 09-08-2024 ರಂದು ಬೆಳಗ್ಗೆ 10.00 ಗಂಟೆಗೆ** ನಿಗದಿತ ನಮೂನೆಯೊಂದಿಗೆ ಸಂದರ್ಶನಕ್ಕೆ ಹಾಜರಾಗಲು ತಿಳಸಿದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ವಿಭಾಗದ ಹೆಸರು | ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ಅಂಗರಚನಾಶಾಸ್ತ್ರ<br>Veterinary Anatomy | 01 |
| 2 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ರೋಗಶಾಸ್ತ್ರ<br>Veterinary Pathology | 01 |
| 3 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ಔಷಧ ಮತ್ತು ವಿಷಶಾಸ್ತ್ರ ವಿಭಾಗ<br>Veterinary Pharmacology and Toxicology | 01 |

**ವಿದ್ಯಾರ್ಹತೆ:**

- ಸಂಬಂಧಪಟ್ಟ ವಿಷಯದಲ್ಲಿ ಭಾರತೀಯ ಪಶುವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆ ಹೊಂದಿರುವ ಮಹಾವಿದ್ಯಾಲಯಗಳಿಂದ ಪಶುವೈದ್ಯಕೀಯ ಅಥವಾ ಭಾರತೀಯ ಕೃಷಿ ಅನುಸಾಂಧ ಪರಿಷತ್ತಿನ ಅಡಿಯಲ್ಲಿ ಬರುವ Deemed Institutions ಗಳಿಂದ BVSc&AH ಪದವಿ ಪಡೆದಿರಬೇಕು
- ಸಂಬಂಧಪಟ್ಟ ವಿಷಯದಲ್ಲಿ ಎಂವ್ಹಿಎಸ್‌ಸಿ (MVSc) ಅಥವಾ ಪಿಎಚ್‌ಡಿ (Ph.D) ಪಡೆದಿರಬೇಕು
- ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (NET) ಉತ್ತೀರ್ಣರಾದವರಿಗೆ ಮೊದಲ ಆದ್ಯತೆ ನೀಡಲಾಗುವುದು.

**ಷರತ್ತು ಮತ್ತು ನಿಬಂಧನೆಗಳು:**

- ಪಿಎಚ್‌ಡಿ ಪದವಿ/ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಉತ್ತೀರ್ಣರಾಗಿ ಪ್ರಮಾಣಪತ್ರ ಹೊಂದಿರುವ ಅಭ್ಯರ್ಥಿಗಳಿಗೆ ಮಾಸಿಕ ರೂ. 56,700/- ಸಂಭಾವನೆ ನೀಡಲಾಗುವುದು ಹಾಗೂ ಪಿಎಚ್‌ಡಿ ಪದವಿ/ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಪ್ರಮಾಣ ಪತ್ರ ಹೊಂದಿರದ ಅಭ್ಯರ್ಥಿಗಳಿಗೆ ಮಾಸಿಕ **ರೂ. 50,000/-** ವೇತನ ಪಾವತಿಸಲಾಗುವುದು
- ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಬಂದು ಸಂದರ್ಶನಕ್ಕೆ ಹಾಜರಾಗಬೇಕು
- ಅಭ್ಯರ್ಥಿಗಳು ಯಾವುದೇ ಸಂಧರ್ಭದಲ್ಲಿ ಅರ್ಜಿಗಳನ್ನು ಮುಂಚಿತವಾಗಿ ಅಥವಾ ಮಿಂಚಂಚೆ ಮೂಲಕ ಕಳುಹಿಸುವಂತಿಲ್ಲ
- ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಪ್ರಸ್ತುತ ಖಾಲಿ ಇರುವ ಹುದ್ದೆಗಳ ಎದುರಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿಯಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಖಾಯಮಾತಿ, ಹಿರಿತನ, ಸಕ್ರಮಾತಿ, ಪಿ.ಎಫ್/ಇ.ಎಸ್.ಐ ಮತ್ತು ಇತರೆ ಯಾವುದೇ ತರಹದ ಸೌಲಭ್ಯ ಅಥವಾ ಹಕ್ಕಿಗೆ ಒಳಪಟ್ಟಿರುವುದಿಲ್ಲ
- ಸದರಿ ಅಧಿಸೂಚನೆಯು ತಾತ್ಕಾಲಿಕ ನೇಮಕಾತಿಯಾಗಿದ್ದು, ಯಾವುದೇ ಸಮಯದಲ್ಲಿ ಯಾವುದೇ ಮಾಹಿತಿ ನೀಡದೆ ಕೆಲಸದಿಂದ ಬಿಡುಗಡೆ ಮಾಡಬಹುದು ಅಥವಾ ಅವಧಿಯ ಮುಂಚಿತವಾಗಿ ಆದೇಶ ರದ್ದು ಬಹುದಾಗಿದೆ
- ಪ್ರಸ್ತುತ ಸಹಾಯಕ ಪ್ರಾಧ್ಯಾಪಕ ಹುದ್ದೆಗಳು 179 ದಿನಗಳ ಅವಧಿಗೆ ಮಾತ್ರ ಅಥವಾ ಖಾಯಂ ಭೋಧಕ ಸಿಬ್ಬಂದಿಗಳ ಭರ್ತಿ ಆಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.
- ಕಲ್ಯಾಣ ಕರ್ನಾಟಕ ಅಥವಾ ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು

ಡೀನ್(ಪವೈ)

ಡೀನ್(ಪವೈ)
ಪಶುವೈದ್ಯಕೀಯ ಮಹಾವಿದ್ಯಾಲಯ
ನಂದಿನಗರ, ಅ.ಪೆ.ಸಂಖ್ಯೆ 6, ಬೀದರ

ಪ್ರ.ಆ:

1. ಮಾನ್ಯ ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು/ಶಿವಮೊಗ್ಗ/ಹಾಸನ/ಗದಗ ಇವರ ಮಾಹಿತಿಗಾಗಿ ಹಾಗೂ ತಮ್ಮ ಮಹಾವಿದ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ
2. ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ ಇವರ ಮಾಹಿತಿಗಾಗಿ ಸದರಿ ಪ್ರಕಟಣೆಯನ್ನು ವ್ಯಾಪಕವಾಗಿ ಪ್ರಚುರ ಪಡಿಸಲು ಮಾಹಿತಿಸಿದೆ
3. ಹಿರಿಯ ಆಪ್ತ ಕಾರ್ಯದರ್ಶಿಗಳು ಗ್ರೇಡ್-1, ಮಾನ್ಯ ಕುಲಪತಿಗಳ ಕಛೇರಿ, ಕಪಪಂಮೀವಿವಿ, ಬೀದರ ಮಾಹಿತಿಗಾಗಿ ಮತ್ತು ಮಾನ್ಯ ಕುಲಪತಿಗಳ ಗಮನಕ್ಕೆ ತರಲು ಕೋರಿದೆ.